

ಮುಂದಿನ ದಿನಗಳಲ್ಲಿ ಸಿನಿಮಾ ಮತ್ತು ಧಾರಾವಾಹಿಗಳಿಗೆ ಮಾತ್ರ ಟೀವಿ ಸೀಮಿತ ಆಗುತ್ತದೆಯೋ ಗೊತ್ತಿಲ್ಲ. ಆರಂಭದಲ್ಲಿ ಮೂಡಿ ಬಂದ ಹಲವಾರು ಷೋಗಳಲ್ಲಿ ನಾಯಕರಂತೆ ಹೊರಹೊಮ್ಮಿದವರ ಸಾಲಿಗೆ, ಈಗೀನ ಬಹುತೇಕ ಕಾರ್ಯಕ್ರಮಗಳು ಹೊಸಬರನ್ನೇಕೆ ಸೇರಿಸುತ್ತಿಲ್ಲ ಎಂದು ಪ್ರಶ್ನಿಸಿಕೊಂಡರೆ, ರಿಯಾಲಿಟಿ ಷೋಗಳ ಸಂಕೀರ್ಣತೆ, ತೀವ್ರಸ್ಪರ್ಧೆ ಮತ್ತು ಅವುಗಳ ಮಿತಿ ಅರ್ಥವಾಗುತ್ತದೆ. ಎರಡು ದಶಕಗಳ ಹಿಂದೆ ವಿಶ್ವಸುಂದರಿ, ಮಿಸ್ ಇಂಡಿಯಾ ಸ್ಪರ್ಧೆಗಳು ಅಪಾರ ಜನಪ್ರಿಯತೆ ಗಳಿಸಿದ್ದವು. ಆ ಸ್ಪರ್ಧೆಗಳ ವಿಜೇತರ ಬಗ್ಗೆ ತಿಳಿಯುವುದು ಸಾಮಾನ್ಯ ಜ್ಞಾನದ ಭಾಗವೋ ಎನ್ನುವ ಮಟ್ಟಿಗೆ ಅವು ಖ್ಯಾತಿ ಗಳಿಸಿದ್ದವು. ಆದರೆ ಈಗ ಅದು ಒಂದು ದಿನದ ಸಣ್ಣ ಸುದ್ದಿ ಮಾತ್ರ ಆಗಿ ಮಾಸಿ ಹೋಗುತ್ತದೆ. ಯಾರು ಏನಾದರೂ ಎನ್ನುವ ಕುತೂಹಲ ಕೂಡ ಉಳಿದಿಲ್ಲ. ಅದರ ಪ್ರತಿಫಲನ ರಿಯಾಲಿಟಿ ಷೋಗಳಲ್ಲಿಯೂ ಕಾಣಬಹುದು. ಆರಂಭದಲ್ಲಿ ರಿಯಾಲಿಟಿ ಷೋಗಳಿಂದ ಬಂದ ಪ್ರತಿಭೆಗಳಿಗೆ ಸಿಕ್ಕ ಮನ್ನಣೆ ಇತ್ತೀಚಿನ ದಿನಗಳಲ್ಲಿ ಕಡಿಮೆ ಆಗುತ್ತಿದೆ. ಈ ಪಲ್ಲಟದ ನಡುವೆಯೂ ಶಶಿಕುಮಾರ್, ಚನ್ನಪ್ಪ, ಹನುಮಂತಪ್ಪ ಅವರಂತಹ ಸಾಮಾನ್ಯರು ಪುರಸ್ಕಾರಕ್ಕೆ ಪಾತ್ರವಾಗುವ ಮೂಲಕ ಅವರ ಬದುಕಿನ ಸ್ಥರವನ್ನೇ ಬದಲಿಸುತ್ತಿರುವುದು ರಿಯಾಲಿಟಿ ಷೋಗಳ ಹೆಗ್ಗಳಿಕೆಯೇ ಸರಿ.

## ಕುಗ್ಗದ ಕುತೂಹಲ

ಮುಂಬೈಯಲ್ಲಿ ಜನಪ್ರಿಯರಾಗಿದ್ದ ಶ್ರುತಿ ಪ್ರಕಾಶ್ ಬಿಗ್‌ಬಾಸ್ ಮೂಲಕ ಕರ್ನಾಟಕದ ಮನೋರಂಜನಾ ಕ್ಷೇತ್ರದಲ್ಲಿ ಪ್ರವರ್ಧಮಾನಕ್ಕೆ ಬಂದರು. ಈಗ ಅವರು 'ತಕಧಿಮಿತ' ಷೋದಿಂದ ನಿರ್ಗಮಿಸಿದ್ದಾರೆ. ಅವರ ನಿರ್ಗಮನ ಹಲವರಲ್ಲಿ ಆಶ್ಚರ್ಯವನ್ನು ಹುಟ್ಟಿಸಿತ್ತು. ಶ್ರುತಿ ಏಕೆ ಹೊರಬಂದಿದ್ದಾರೆ ಎನ್ನುವ ಪ್ರಶ್ನೆಗಳನ್ನೂ ಸಾಮಾಜಿಕ ಮಾಧ್ಯಮಗಳಲ್ಲಿ ಕೇಳಿದ್ದರು. ಅದು ಚರ್ಚೆಯ ವಿಷಯ ಆಗುತ್ತಿದ್ದಂತೆಯೇ ಸ್ವತಃ ಅವರೇ ಉತ್ತರಿಸಿ ಆ ಕುತೂಹಲವನ್ನು ತಣಿಸಿದ್ದಾರೆ. ದೊಡ್ಡವೇದಿಕೆಯಲ್ಲಿ ಡಾನ್ಸ್ ಮಾಡಬೇಕು ಎನ್ನುವುದು ಅವರ ಬಾಲ್ಯದ ಕನಸು. 'ನನ್ನ ಕನಸು ಈಡೇರಿದೆ, ಆ ವಿಷಯದಲ್ಲಿ ತಾನು ಅದೃಷ್ಟವಂತೆ. ಎಷ್ಟೋ ಜನರಿಗೆ ಕನಸು ನನಸಾಗುವುದಿಲ್ಲ' ಎನ್ನುವ ಶ್ರುತಿ, ತಮ್ಮ ಒಂದು ಕಾಲಿಗೆ ಪೆಟ್ಟು ಬಿದ್ದಿದ್ದರಿಂದ ವಿಶ್ರಾಂತಿ ಅನಿವಾರ್ಯವಾಗಿದ್ದು, ಸ್ವಲ್ಪ ದಿನ ನೃತ್ಯದಿಂದ ದೂರ ಇರುವುದಾಗಿ ಹೇಳಿದ್ದಾರೆ. ತಕಧಿಮಿತ ಅವರ ಸ್ಥಾನವನ್ನು ತುಂಬಿದ ಕವಿತಾಗೌಡ ಕೂಡ ಬಿಗ್‌ಬಾಸ್ ಪ್ರತಿಭೆ. ಆ ಕಾರ್ಯಕ್ರಮದ ನಿರೂಪಕ ಅಕುಲ್ ಬಾಲಾಜಿ ಕೂಡ ಅಲ್ಲಿಯವರೇ.

ಶಶಿಕುಮಾರ್ ಕೃಷಿ ಪದವಿಧರನಾಗಿದ್ದು ಕೃಷಿಯನ್ನೇ ಧ್ಯಾನಿಸಿ ಒಬ್ಬ ರೈತ ಆಗಿರುವುದು ಜನಪ್ರಿಯ ಸುದ್ದಿ ಆಗಿರಲಿಲ್ಲ. ಅದು ಯಾರಿಗೂ ಗೊತ್ತೂ ಇರಲಿಲ್ಲ. ಈ ಹಿಂದೆ ದಿವಾಕರ್ ಎನ್ನುವ ಸಾಮಾನ್ಯ ಮಾರಾಟ ಪ್ರತಿನಿಧಿ ತಮ್ಮ ಮಾರುಕಟ್ಟೆಯ ಸೀಮಿತ ವಲಯಕ್ಕೆ ಪರಿಚಿತರಾಗಿದ್ದರು. ಅವರು ಬಿಗ್ ಬಾಸ್ ಮೂಲಕ ಗಳಿಸಿದ ಕೀರ್ತಿ ಅಷ್ಟಿಷ್ಟಲ್ಲ. ರಿಯಾಲಿಟಿ ಷೋಗಳು ಸ್ಪರ್ಧಿಗಳಿಗೆ ಮಾತ್ರವಲ್ಲ, ಅವುಗಳ ತೀರ್ಪುಗಾರರಿಗೂ ಮತ್ತಷ್ಟು ಮೊಗದಷ್ಟು ಜನಪ್ರಿಯತೆಯನ್ನು ತಂದುಕೊಟ್ಟಿವೆ.

'ತಕಧಿಮಿತ' ಷೋನ ಹಿಂದಿನ ಜ್ಯೂರಿ ಮಯೂರಿ ಉಪಾಧ್ಯ ಹಾಗೂ ಪ್ರಸಕ್ತ ಸಾಲಿನ ಜ್ಯೂರಿ ಅನುರಾಧಾ ವಿಕ್ರಾಂತ್ ನೃತ್ಯ ಕ್ಷೇತ್ರಗಳಲ್ಲಿ ಪರಿಚಿತರು. ಮಯೂರಿ ಅವರಂತೂ ಅಂತರರಾಷ್ಟ್ರೀಯ ಖ್ಯಾತಿಯ ನೃತ್ಯ ಸಂಯೋಜಕಿ. ಈ ಸಾಧಕರನ್ನು ಕನ್ನಡಿಗರ ಮನೆ ಮನೆಗಳಿಗೆ ತಲುಪಿಸಿದ್ದನ್ನು ರಿಯಾಲಿಟಿ ಷೋಗಳ ಜನಪ್ರಿಯತೆಯ ರೂಪದಲ್ಲಿಯೇ ಕಾಣಬೇಕು.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in